# ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿ

# PILIKULA REGIONAL SCIENCE CENTRE SOCIETY

ವಿಜ್ಞಾನ ಕೇಂದ್ರ ,ಮೂಡುಶೆಡ್ಡೆ ಅಂಚೆ, ಮಂಗಳೂರು –575 028 ದೂ -0824 -2263565 ಫ್ಯಾಕ್ಸ್:2263562

Science Center Moodushedde post Mangaluru-575 028 Ph 0824-2263565 fax :2263562

website:www.pilikularsc.com Email:prscmangalore@gmail.com.

ಸಂ: ಪಿ.ಪ್ರಾ.ವಿ.ಕೆ/ವಿವ/63/ವಾಹನ/2015–16. ದಿನಾಂಕ: 23.01.2016

## ಟೆಂಡರ್ ಅಧಿಸೂಚನೆ

ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸದಸ್ಯ ಕಾರ್ಯದರ್ಶಿಯವರ ಕಛೇರಿ ಉಪಯೋಗಕ್ಕಾಗಿ 2013ರ ನಂತರದ ಮಾಡೆಲಿನ ಕಾರನ್ನು ಬಾಡಿಗೆ ನೆಲೆಯಲ್ಲಿ 05.02.2016 ರಿಂದ 31.03.2017 ರ ಅವಧಿಗೆ ಒದಗಿಸಲು ಈ ಕೆಳಕಾಣಿಸಿದ ನಿಬಂಧನೆಗಳ ಅನುಸಾರವಾಗಿ ಆಸಕ್ತ ವಾಹನ ಮಾಲಿಕರಿಂದ ಟೆಂಡರನ್ನು ಸದಸ್ಯ ಕಾರ್ಯದರ್ಶಿ, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿ ಮೂಡುಶೆಡ್ಡೆ, ಮಂಗಳೂರು ಇವರು ಆಹ್ವಾನಿಸಿದ್ದಾರೆ.

1. 2013 ಹಾಗೂ ನಂತರದ ಮಾಡೆಲ್‌ನ 4+1 ಸೀಟಿನ ಸುಸ್ಥಿತಿಯಲ್ಲಿರುವ ಹವಾನಿಯಂತ್ರಿತ ವಾಹನವಾಗಿರಬೇಕು. ಮಾಲಿಕರೇ ಚಾಲಕನಾಗಿರುವವರು ಟೆಂಡರು ಸಲ್ಲಿಸಲು ಅರ್ಹರಾಗಿರುತ್ತಾರೆ.
2. ವಾಹನವನ್ನು ಪೂರ್ತಿ ಸಂಸ್ಥೆಯ ಅಧೀನದಲ್ಲಿ ಅದರ ಉಪಯೋಗಕ್ಕೆ 12 ಗಂಟೆಗಳ ಸೇವೆಗೆ ವಹಿಸಿಕೊಡ ತಕ್ಕದ್ದು. ಅಗತ್ಯವಿದ್ದಲ್ಲಿ ರಾತ್ರಿ ವೇಳೆಯಲ್ಲಿ ಕೂಡಾ ನೀಡಬೇಕು.
3. ವಾಹನದ ಇಂಧನ, ದುರಸ್ತಿ ವೆಚ್ಚ, ಚಾಲಕರ ವೇತನ ಭವಿಷ್ಯ ನಿಧಿ, ಇನ್ಸುರೆನ್ಸ್, ತೆರಿಗೆ(ಹೊರರಾಜ್ಯಕ್ಕೆ ಪ್ರಯಾಣಿಸುವಾಗ ಪಾವತಿಸಬೇಕಾದ ತೆರಿಗೆ ಸೇರಿ), ಇತ್ಯಾದಿಗಳನ್ನು ಪೂರ್ತಿ ವಾಹನ ಮಾಲೀಕರ ವತಿಯಿಂದಲೇ ಭರಿಸತಕ್ಕದ್ದು. ಯಾವುದೇ ರೀತಿಯ ವೆಚ್ಚವನ್ನು ನೀಡಲಾಗುವುದಿಲ್ಲ.
4. ವಾಹನವನ್ನು ಕನಿಷ್ಠ ಒಂದು ತಿಂಗಳಿಗೆ 2000 ಕಿ.ಮೀ ಚಲಾಯಿಸಲು ತಿಂಗಳೊಂದರ ಒಟ್ಟು ಬಾಡಿಗೆ ದರವನ್ನು ನಮೂದಿಸಬೇಕು. 2000 ಕಿ.ಮೀ ಗಿಂತ ಮೀರಿ ಚಲಾಯಿಸಿದಲ್ಲಿ ಹೆಚ್ಚಿಗೆ ಚಲಾಯಿಸಿದ ದೂರಕ್ಕೆ ಕಿ.ಮೀ.1 ಕ್ಕೆ ರೂ 10/– ನೀಡಲಾಗುವುದು.
5. ವಾಹನವನ್ನು ದುರಸ್ತಿಗೆ ಅಥವಾ ಇನ್ನಿತರ ಯಾವುದಾದರೂ ಕೆಲಸಗಳಿಗೆ ವಾಹನ ಮಾಲೀಕರ ವತಿಯಿಂದ ನಿಲ್ಲಿಸಿದಲ್ಲಿ ತಕ್ಷಣ ವಿಳಂಬವಿಲ್ಲದೇ ತತ್ಸಮಾನವಾದ ಸುಸ್ಥಿತಿಯಲ್ಲಿರುವ ಬದಲಿ ವಾಹನವನ್ನು ವಾಹನದ ಮಾಲೀಕರು ತಕ್ಷಣ ಒದಗಿಸಬೇಕಾಗುತ್ತದೆ.
6. ಟೆಂಡರ್ ಅವಧಿ ದಿನಾಂಕ:5.02.2016 ರಿಂದ 31.03.2017 ರ ತನಕ ಇರುತ್ತದೆ.ಅಗತ್ಯವೆಂದು ಕಂಡುಬಂದಲ್ಲಿ ಹಾಗೂ ವಾಹನ ಸೇವೆಯು ತೃಪ್ತಿಕರವಾಗಿದ್ದಲ್ಲಿ ಸಂಸ್ಥೆಯ ಅಧಿಕಾರಿಗಳ/ ಸದಸ್ಯ ಕಾರ್ಯದರ್ಶಿಯವರ ವಿವೇಚನೆಯಿಂದ ಮುಂದುವರಿಸಲಾಗುವುದು.
7. ದರಪಟ್ಟಿಯನ್ನು ಈ ಕಛೇರಿಯಲ್ಲಿ ದಿ:02.02.2016 ರಂದು (ಮಂಗಳವಾರ) ಅಪರಾಹ್ನ 3.00 ಗಂಟೆಯ ತನಕ ಲಗ್ತೀಕರಿಸಿರುವ ನಮೂನೆಯಲ್ಲಿ ಸ್ವೀಕರಿಸಲಾಗುವುದು.
8. ವಾಹನದ ದಾಖಲಾತಿಯನ್ನು (ಆರ್.ಸಿ, ಡ್ರೈವಿಂಗ್ ಲೈಸೆನ್ಸ್, ಇನ್ಸೂರೆನ್ಸ್) ದರಪಟ್ಟಿಯ ಜೊತೆಯಲ್ಲಿ ಲಗ್ತೀಕರಿಸತಕ್ಕದ್ದು.
9. ಯಾವುದೇ ದಾವೆಗಳಿಗೆ ಒಳಪಟ್ಟ ವಾಹನವನ್ನು ಬಾಡಿಗೆಗೆ ನೀಡಲು ಅವಕಾಶವಿರುವುದಿಲ್ಲ.
10. ಸ್ವೀಕೃತಿಯಾದ ದರಪಟ್ಟಿಯನ್ನು ದಿ:02.02.2016 ರಂದು (ಮಂಗಳವಾರ) ಅಪರಾಹ್ನ 4.00 ಗಂಟೆಗೆ ಸದಸ್ಯ ಕಾರ್ಯದರ್ಶಿಯವರ ಕೊಠಡಿಯಲ್ಲಿ ಹಾಜರಿದ್ದ ಟೆಂಡರುದಾರರ ಸಮಕ್ಷಮದಲ್ಲಿ

ತೆರೆಯಲಾಗುವುದು. ಮತ್ತು ಯಾವುದೇ ಕಾರಣಗಳನ್ನು ನೀಡದೇ ದರಪಟ್ಟಿಯನ್ನು ತಿರಸ್ಕರಿಸಲು ಸದಸ್ಯ ಕಾರ್ಯದರ್ಶಿಯವರಿಗೆ ಅಧಿಕಾರವಿರುತ್ತದೆ.

11. ಟೆಂಡರ್ ದರಪಟ್ಟಿಯ ಕವರ್ ಮೊಹರು ಹಾಕಿ "ವಾಹನವನ್ನು ಹೊರಗುತ್ತಿಗೆ ನೀಡುವರೇ ಟೆಂಡರ್" ಎಂದು ಬರೆಯಬೇಕು.
12. **ಈ ಹಿಂದೆ ಟೆಂಡರ್ ಮೂಲಕ ವಾಹನವನ್ನು ಒದಗಿಸಿ ನಂತರ ಟೆಂಡರ್ ಶರ್ತಗಳನ್ನು ಪೂರೈಸದೇ ಇರುವವರಿಗೆ ಈಗ ಟೆಂಡರ್ ಸಲ್ಲಿಸಲು ಅವಕಾಶವಿರುವುದಿಲ್ಲ.**
13. ಕಛೇರಿಯಿಂದ ವಾಹನದ ಉಪಯೋಗದ ಬಗ್ಗೆ ಕಾಲಕಾಲಕ್ಕೆ ನೀಡಲಾಗುವ ಸೂಚನೆಗಳನ್ನು ಪಾಲಿಸಬೇಕು ಹಾಗೂ ಕಛೇರಿಯ ಪೂರ್ಣ ಬಳಕೆಗೆ ವಾಹನವು ಚಾಲಕರೊಂದಿಗೆ ಲಭ್ಯವಾಗಬೇಕು.

*ಟೆಂಡರು ಸಲ್ಲಿಸುವ ನಮೂನೆಯನ್ನು ಲಗ್ತೀಕರಿಸಿದೆ.*

ಸದಸ್ಯ ಕಾರ್ಯದರ್ಶಿ
ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ ಸೊಸೈಟಿ
ಮೂಡುಶೆಡ್ಡೆ, ಮಂಗಳೂರು

ರಿಗೆ,

1. ಸಂಬಂಧಪಟ್ಟ ಗುತ್ತಿಗೆದಾರರಿಗೆ (ಪಟ್ಟಿ ಪ್ರಕಾರ)
2. ನಿರ್ದೇಶಕರು, ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ
3. ಪಿಲಿಕುಳ ನಿಸರ್ಗಧಾಮದ ಇತರ ವಿಭಾಗದ ಅಧಿಕಾರಿಗಳಿಗೆ ಪ್ರಚಾರಕ್ಕಾಗಿ.
4. ಪಿಲಿಕುಳ ಕಛೇರಿಯ ಸೂಚನಾ ಫಲಕಕ್ಕೆ.

# ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ, ಮೂಡುಶೆಡ್ಡೆ, ಮಂಗಳೂರು
# ವಾಹನ ಹೊರಗುತ್ತಿಗೆ ನೀಡುವ ಬಗ್ಗೆ ಟೆಂಡರ್ ನಮೂನೆ

ಗೆ,

ಸದಸ್ಯ ಕಾರ್ಯದರ್ಶಿ
ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರ
ಮೂಡುಶೆಡ್ಡೆ ಪೋಸ್ಟ್,
ಮಂಗಳೂರು-575028

ತಮ್ಮ ಕಛೇರಿಯ ಟೆಂಡರ್ ಅಧಿಸೂಚನೆ ಸಂಖ್ಯೆ: ಪಿ.ಪ್ರಾ.ವಿ.ಕೆ/ವಿವ/63ವಾಹನ/2015-16. ದಿನಾಂಕ:23.01.2016 ರಂತೆ ಪಿಲಿಕುಳ ಪ್ರಾದೇಶಿಕ ವಿಜ್ಞಾನ ಕೇಂದ್ರದ ಸದಸ್ಯ ಕಾರ್ಯದರ್ಶಿಯವರ ಕಛೇರಿ ಉಪಯೋಗಕ್ಕಾಗಿ ವಾಹನವನ್ನು ಬಾಡಿಗೆಗೆ ನೀಡುವ ಬಾಬ್ತು ಟೆಂಡರ್ ಅಧಿಸೂಚನೆಯಲ್ಲಿ ಕಾಣಿಸಿದ ಎಲ್ಲಾ ನಿಬಂಧನೆಗಳನ್ನು ನಾನು ಓದಿ ತಿಳಿದುಕೊಂಡಿರುವೆನು. ಸದ್ರಿ ನಿಬಂಧನೆಗಳನ್ನು ಹಾಗೂ ಈ ಬಾಬ್ತು ನಿರ್ವಹಿಸಲಿರುವ ಕರಾರಿನ ನಿಬಂಧನೆಗಳನ್ನು ಅನುಸರಿಸಲು ನಾನು ಬದ್ಧನಿರುತ್ತೇನೆ.

1. ಟೆಂಡರುದಾರರ ಹೆಸರು, ವಿಳಾಸ

   ಮತ್ತು ದೂರವಾಣಿ ಸಂಖ್ಯೆ :

2. ಪಾನ್ ಕಾರ್ಡ್ ಸಂಖ್ಯೆ :
3. ವಾಹನದ ಮಾಡೆಲ್ ಮತ್ತು ಇತರ ವಿಷಯ :
4. ಎ.ಸಿ ವಾಹನ ( ಹವಾನಿಯಂತ್ರಿತ) : ಹೌದು / ಇಲ್ಲ
5. 2000 ಕಿ.ಮೀ ಚಲಾಯಿಸಲು ತಿಂಗಳ ದರ ರೂ.______________________________

   (ಅಕ್ಷರದಲ್ಲಿ ರೂ.________________________________________________________ಮಾತ್ರ)
6. ವಾಹನದ ಆರ್ ಸಿ. ವಿಮೆ ಪರ್ಮಿಟ್ ಮತ್ತು ತೆರಿಗೆ ಪಾವತಿ ಪತ್ರಗಳ ಪ್ರತಿ ಲಗತ್ತಿಸಿದೆ.

ದಿನಾಂಕ: ಟೆಂಡರುದಾರರ ಸಹಿ/-